**3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.**

**ಪಿ.ಸಿ.ಆರ್. ನಂ. 1153/2024 ಚಾ ಸಾ-1**

| | |
|---|---|
| **ಸಾಕ್ಷಿದಾರರ ಹೆಸರು** | **ಎ.ಬಿ.ಪೂನ್ನಂಚ್ಚ** |
| **ತಂದೆಯ ಹೆಸರು** | **ಲೇಟ್.ಎ.ಕೆ.ಬೆಳ್ಳಿಯಪ್ಪ.** |
| **ವಯಸ್ಸು** | **58 ವರ್ಷ** |
| **ಉದ್ಯೋಗ** | **ಎಂ.ಡಿ. ಎಸ್ .ಆರ್.ಎಸ್ . ಗಾರ್ಡಿಂಗ್ ಪ್ರೈ.ಲಿ. ಬೆಂಗಳೂರು.** |
| **ವಾಸ** | **ಈಜೀಪುರ , ಬೆಂಗಳೂರು** |
| **ಪ್ರಮಾಣೀಕರಿಸಿದ ದಿನಾಂಕ** | **20.05.2024** |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆಃ**

ನಾನು ಎಸ್.ಆರ್.ಎಸ್ .ಗಾರ್ಡಿಂಗ್ ಅಂಡ್ ಫೆಸಿಲಿಟಿ ಮ್ಯಾನೇಜ್ ಮೆಂಟ್ ಪ್ರೈ.ಲಿ. ನಲ್ಲಿ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಈಗ ಆಸ್ಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಆರೋಪಿ ರವಿ ಕುಮಾರ್.ಕೆ.ಎನ್.ಈತ ನಮ್ಮ ಕಚೇರಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಶೋಭಾ ಮಂಗೋಲಿಯಾ ಮತ್ತು ಬಿ.ಎಂ.ಎಸ್ . ಹಾಸ್ಟೆಲ್ ಗಳಿಗೆ ನಾವು ಸೆಕ್ಯೂರಿಟಿ ಗಾರ್ಡ್ ಗಳನ್ನು ಒದಗಿಸಿರುತ್ತೇವೆ. ಅದರ ಮೇಲ್ವಿಚಾರಕಾರಾಗಿ ಆರೋಪಿ ರವಿ ಕುಮಾರ್.ಕೆ. ಎನ್ . ರವರು ಕೆಲಸ ಮಾಡುತ್ತಿದ್ದರು. ನಮ್ಮ ಗಾರ್ಡ್ ಗಳು ಹಾಜರಾಗಿರುವ ಹಾಜರಾತಿಯನ್ನು ಸದರಿ ಶೋಭಾ ಮಂಗೋಲಿಯಾ ಮತ್ತು ಬಿ.ಎಂ.ಎಸ್ . ಹಾಸ್ಟೆಲ್ ಗಳಲ್ಲಿರುವ ಸೆಕ್ಯೂರಿಟಿ ಇನ್ ಚಾರ್ಜ್ ಮತ್ತು ಪ್ರೊಪಾರ್ಟಿ ಮ್ಯಾನೇಜರ್ ಆಗಿರುವವರು ನಮ್ಮ ಗಾರ್ಡ್ ಗಳ ಹಾಜರಾತಿಯನ್ನು ಬರೆದು ಕೊಂಡು ನಮಗೆ ಸಲ್ಲಿಸುತ್ತಾರೆ. ಆದರೆ ಸದರಿ ಆರೋಪಿ ರವಿ ಕುಮಾರ್ ಸದರಿ ಹಾಜರಾತಿ ಅಂದರೆ ಮಸ್ಟರ್ ರೋಲ್ ಗಳನ್ನು ಹೊಸದಾಗಿ ಸೃಷ್ಟಿಸಿ ಕ್ಲೈಂಟ್ ಗಳ ಸಹಿಗಳನ್ನು ಫೋರ್ಜರಿ ಮಾಡಿ, ಕ್ಲೈಂಟ್ ಗಳು ನೀಡಿರುವ ಹಾಜರಾತಿಯ ಬದಲಾಗಿ ತಾನು ಸೃಷ್ಟಿಸಿರುವ ಹಾಜರಾತಿಗಳನ್ನು ನಮಗೆ ನೀಡಿರುತ್ತಾರೆ.

2. ಕೆಲ ದಿನಗಳವರೆಗೆ ಒಬ್ಬ ಗಾರ್ಡ್ ಕೆಲಸ ಮಾಡಿ ಕೆಲಸ ಬಿಟ್ಟಿದ್ದರೆ ಅವರ ಜಾಗದಲ್ಲಿ ಆರೋಪಿ ತಾನು ಒಬ್ಬರನ್ನು ಕಳುಹಿಸಿ ಹಿಂದೆ ಇದ್ದ ಗಾರ್ಡ್ ಕೆಲಸ ಮಾಡಿರುತ್ತಾನೆ ಎಂದು ಹಾಜರಾತಿ ತಯಾರಿಸಿ ನಮಗೆ ಕೊಟ್ಟು ಅವರ ಹೆಸರಿನಲ್ಲಿ ಸಂಬಳ ಪಡೆದು ಕೆಲ ದಿನದ ಸಂಬಳವನ್ನು ಕೆಲಸ ಬಿಟ್ಟ ಗಾರ್ಡ್ ಗೆ ಕೊಡದೇ ತಾನೇ ತೆಗೆದುಕೊಂಡಿರುತ್ತಾನೆ. ಈ ಕುರಿತು ನಾವು ಕಚೇರಿಗೆ ಕರೆಸಿ ಆರೋಪಿಯನ್ನು ವಿಚಾರಿಸಿದಾಗ ತನ್ನ ತಪ್ಪನ್ನು ಆರೋಪಿ ಒಪ್ಪಿಕೊಂಡಿರುತ್ತಾನೆ. ರೂ.2,42,971/-

ಗಳನ್ನು ಸ್ವಂತಕ್ಕೆ ಬಳಸಿಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾನೆ ಮತ್ತು ಆತ ಸಂಬಳದಲ್ಲಿ ಹಣವನ್ನು ಕಡಿತಮಾಡಿಕೊಳ್ಳುವಂತೆ ಮನವಿ ಮಾಡಿಕೊಂಡಿದ್ದ. ಆದರಂತೆ ನಾವು ಆತನಿಗೆ ಪ್ರತಿ ತಿಂಗಳು ರೂ.43,000/- ಸಂಬಳ ಇದ್ದು ಆತನ ಒಂದೂವರೆ ತಿಂಗಳ ಸಂಬಳ ರೂ.66,367/-ಗಳನ್ನು ಕಡಿತ ಗೊಳಿಸಿ ಕೊಂಡಿರುತ್ತೇವೆ. ನಂತರ ಆತನನ್ನು ಕೆಲಸದಿಂದ ತೆಗೆದಿರುತ್ತೇವೆ. ಆತ ತದನಂತರ ರೂ.20,000/-ಗಳನ್ನು ಗೂಗಲ್ ಪೇ ಮೂಲಕ ನನಗೆ ನೀಡಿರುತ್ತಾನೆ. ಬಾಕಿ ರೂ.1,61,604/-ಗಳನ್ನು ಕಂಪನಿಗೆ ನೀಡದೇ ಸ್ವಂತಕ್ಕೆ ಬಳಸಿಕೊಂಡು ಮೋಸ ಮಾಡಿರುತ್ತಾನೆ. ಈ ಕುರಿತು ಆದ ನಮ್ಮ ಕಂಪನಿಗೆ ಮನವಿ ಪತ್ರವನ್ನು ಬರೆದು ಕೊಟ್ಟಿರುತ್ತಾನೆ. ಅದನ್ನು ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಕ್ಲೈಂಟ್ ನೀಡಿರುವ ಹಾಜರಾತಿ ಮತ್ತು ಆರೋಪಿ ನೀಡಿರುವ ಹಾಜರಾತಿಗಳನ್ನು ಪ್ರತ್ಯೇಕವಾಗಿ ಹಾಜರುಪಡಿಸಿರುತ್ತೇನೆ ಮತ್ತು ಆರೋಪಿಯ ನೇಮಕಾತಿ ಪತ್ರವನ್ನು ಸಹ ಹಾಜರುಪಡಿಸಿರುತ್ತೇನೆ. ಅವುಗಳನ್ನು ಪರಿಗಣಿಸಲು ವಿನಂತಿ. ಅದರಂತೆ ಪೇಮೆಂಟ್ ಸ್ಲಿಪ್ ಗಳನ್ನು ಹಾಜರುಪಡಿಸಿರುತ್ತೇನೆ. ಆದ್ದರಿಂದ ಆರೋಪಿ ರವಿ ಕುಮಾರ್.ಕೆ. ಎನ್ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಲು ವಿನಂತಿ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಎಮ್.ಎಮ್.ನ್ಯಾ.**
**ಬೆಂಗಳೂರು.**

Complainant present. Advocate for complainant has filed memo with some documents.
Sworn statement of complainant is recorded as CW-1.
Sworn statement as CW-1. Closed.
For Hearing. Call on 12.06.2024.

III Addl.C.M.M, Bengaluru.